ಭಿಕ್ಷೆ ಬೇಡುವ ಮಕ್ಕಳ ಮಕ್ಕಳ ಪರಿಸ್ಥಿತಿ ಸುಧಾರಣೆ

32(492) ಶ್ರೀ ಕೋಳಿವಾಡ್ ಕೃಷ್ಣಪ್ಪ ಭೀಮಪ್ಪ (ರಾಣೆಬೆನ್ನೂರು): ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಭಿಕ್ಷೆ ಬೇಡವ ಎಂಜಲು ಎಲೆಗಳಿಗೆ ಪರಿತಪಿಸಲು ಮಕ್ಕಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಈ ಅನಾಥ ಮಕ್ಕಳಿಗೆ ಸರ್ಕಾರವು ಪರಿಹಾರ ಒದಗಿಸುವ ಬಗ್ಗೆ ವಿಚಾರ ಮಾಡಿದೆಯೇ;

ಇ) ಸರ್ಕಾರ ಈ ದಿಸೆಯಲ್ಲಿ ವಿದ್ಯಾಭ್ಯಾಸ ಹಾಗೂ ವಸತಿ ಸೌಲಭ್ಯವನ್ನು ಒದಗಿಸಲು ಬೀದಿಯ ಭಾಗ್ಯ ಎಂಬ ಯೋಜನೆಯನ್ನು ಕಾರ್ಯ ರೂಪಕ್ಕೆ ತರಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):

ಅ) ಬಂದಿದೆ

ಆ) ಮಾಡಿದೆ

ಇ) ಬೀದಿ ಮಕ್ಕಳ ಯೋಜನೆಯನ್ನು ಕೇಂದ್ರ ಸರ್ಕಾರವು ಧನ ಸಹಾಯದಿಂದ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಕಾರ್ಯಗತಗೊಳಿಸಲಾಗಿದೆ.

ಶ್ರೀ ಕೆ.ಬಿ. ಕೋಳಿವಾಡ: ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಭಿಕ್ಷೆ ಬೇಡುವ ಮತ್ತು ಎಂಜಲು ಎಲೆಗಳಿಗೆ ಪರಿತಪಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇ ಅದಕ್ಕೆ ಅವರು ಬಂದಿದೆ ಎಂದು ಹೇಳಿರುತ್ತಾರೆ. ಅವರಿಗೆ ನೀವು ಯಾವ ರೀತಿಯಾಗಿ ರಕ್ಷಣೆ ಕೊಡುತ್ತೀರೆಂದು ಕೇಳಿದರೆ, ಕೇಂದ್ರ ಸರ್ಕಾರದಿಂದ ಬರತಕ್ಕಂಥ ಸಹಾಯದಿಂದ ಸ್ವಯಂಸೇವಾ ಸಂಸ್ಥೆಗಳ ಮೂಲಕ ಕಾರ್ಯಗತಗೊಳಿಸಲಾಗುತ್ತದೆಂದು ಹೇಳಿರುತ್ತಾರೆ. ಈ ಮಕ್ಕಳು ನಮ್ಮ ರಾಜ್ಯದಲ್ಲಿ ಎಷ್ಟು ಇದ್ದಾರೆ, ಎನ್ನುವುದರ ಬಗ್ಗೆ ಹೇಳುವುದಕ್ಕೆ ಸರ್ಕಾರಕ್ಕೆ ಸಾಧ್ಯವಿದೆಯೇ? ಯಾವ ಯಾವ ಸ್ವಯಂ ಸೇವಾ ಸಂಸ್ಥೆಗಳಲ್ಲಿ ಅವರು ರಕ್ಷಣೆಯನ್ನು ಪಡೆಯುತ್ತಿದ್ದಾರೆ. ಹಿಂದೆ ಸರ್ಕಾರ "ಬೀದಿಯ ಭಾಗ್ಯ" ಎನ್ನುವ ಒಂದು ಯೋಜನೆಯನ್ನು ಮಾಡಿ ಹಾಸ್ಟೆಲುಗಳನ್ನು ಕಟ್ಟಿಸಿ ವಿದ್ಯಾಭ್ಯಾಸವನ್ನು ಕೊಡತಕ್ಕಂಥ, ಬಟ್ಟೆ ಬರೆಗಳನ್ನು ಕೊಡತಕ್ಕಂಥ ಒಂದು ಯೋಜನೆ ಬಗ್ಗೆ ಸರ್ಕಾರದ ಮಟ್ಟದಲ್ಲಿ, ಚಿಂತನೆ ಮಾಡಲಾಗಿತ್ತು. ಈ ಯೋಜನೆಯನ್ನು ಕಾಯ ರೂಪಕ್ಕೆ ತರುವ ಬಗ್ಗೆ ಸರ್ಕಾರಕ್ಕೆ ಯೋಚನೆ ಇದೆಯೆ? ಜಿಲ್ಲೆಗೊಂದು ಇಂತಹ ಕೇಂದ್ರಗಳನ್ನು ಪ್ರಾರಂಭ ಮಾಡಿ, ಎಂಜಲು ಎಲೆಗಳಿಗೆ ಪರಿತಪಿಸುವಂಥ ಮಕ್ಕಳಿಗೆ ಸರ್ಕಾರ ರಕ್ಷಣೆ ಕೊಡುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ (ಸಾರಿಗೆ ಸಚಿವರು): (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಕೆಲವು ಮಾಹಿತಿಗಳನ್ನು

ಒದಗಿಸಿಕೊಡಲಾಗಿದೆ. ಮುಂದೆ ರೂಪಿಸಿಕೊಳ್ಳುವ ಒಂದು ಕಾರ್ಯಕ್ರಮದ ಬಗ್ಗೆ ಕೆಲವು ಸೂಚನೆ ಹಾಗೂ ಮಾಹಿತಿಗಳನ್ನು ಒದಗಿಸಿಕೊಟ್ಟಿದ್ದಾರೆ. ಬೀದಿಯಲ್ಲಿ ಭಿಕ್ಷೆ ಬೇಡುವ ಮಕ್ಕಳ ಬಗ್ಗೆ ಒಂದು ಸಮೀಕ್ಷೆ ನಮ್ಮ ರಾಜ್ಯದಲ್ಲಿ ನಡೆಯಲಿಲ್ಲ. ಇದನ್ನು ನಡೆಸುವಂಥೆ ನಾವು ತೀರ್ಮಾನ ಮಾಡಬೇಕಾಗಿದೆ. ನಮ್ಮ ಸರ್ಕಾರ ಸಮೀಕ್ಷೆ ನಡೆಸುವುದರ ಬಗ್ಗೆ ಸಹ ಆಲೋಚನೆಯನ್ನು ಮಾಡುತ್ತಿದೆ. ಯಾವ ಮಕ್ಕಳು ಬೇಡುತ್ತಿದ್ದಾರೋ ಅವರಿಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಒಂದು ಜಂಟಿ ನಿರ್ದೇಶನಾಲಯಯಿಂದ ಆಶ್ರಯ ಹಾಗೂ ವಿದ್ಯಾಭ್ಯಾಸಕ್ಕೆ ಬೇಕಾದರೆ ಪರಿಹಾರವನ್ನು ನಾವು ಒದಗಿಸಿಕೊಡುತ್ತಿದ್ದೇನೆ. ಇದರ ಸಮೀಕ್ಷೆ ಇಡೀ ರಾಜ್ಯದಲ್ಲಿ ನಡೆದ ನಂತರ, ಜಿಲ್ಲಾ ಕೇಂದ್ರಗಳಲ್ಲಿ ಅಥವಾ ಇತರೆ ಕೇಂದ್ರಗಳಲ್ಲಿ ಪ್ರತ್ಯೇಕವಾಗಿ ಒಂದು ಕಟ್ಟಡವನ್ನು ಕಟ್ಟಿಸಿ ಇಂತಹ ಭಿಕ್ಷೆ ಬೇಡುವ ಮಕ್ಕಳ ಬಗ್ಗೆ ಮುಂದಿನ ದಿವಸಗಳಲ್ಲಿ ಒಂದು ಕಾರ್ಯಕ್ರಮ ಹಾಕಿಕೊಳ್ಳುವುದರ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತದೆಂದು ನಾನು ತಮ್ಮ ಮೂಲಕ ಹೇಳುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ: ಎಷ್ಟು ಮಕ್ಕಳು ಯಾವ ಯಾವ ಸಂಸ್ಥೆಗಳಲ್ಲಿ ಇದರ ರಕ್ಷಣೆ ಪಡೆಯುತ್ತಿದ್ದಾರೆಂದು ಕೇಳಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್: ತಕ್ಷಣದಲ್ಲಿ ಮಾಹಿತಿ ಲಭ್ಯವಿಲ್ಲದಿರುವುದರಿಂದ ಪ್ರತ್ಯೇಕವಾಗಿ ಅದರ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್: ಸರ್ಕಾರ ಗ್ರಾಂಟ್ ಕೊಡತಕ್ಕಂಥ ಅನಾಥಾಶ್ರಮಗಳಲ್ಲಿ ಇಂತಹ ಮಕ್ಕಳನ್ನು ಸೇರಿಸಿಕೊಳ್ಳುವಂಥ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಸಮೀಕ್ಷೆ ಮಾಡುವುದು ಕೆಲವು ವರ್ಷಗಳಾಗುತ್ತವೆ, ಅದಕ್ಕಾಗಿ ಅಂತಹದ್ದು ಏನಾದರೂ ಕಂಡುಬಂದಲ್ಲಿ ಸೇರಿಸುವಂಥ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್: ಅಂತಹ ಬೇಡಿಕೆಗಳು ಬಂದಾಗ ಇಲಾಖೆ ತಕ್ಷಣ ಸ್ಪಂದಿಸುತ್ತದೆಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ರಾಜ್ಯದಲ್ಲಿ ಹೋಟೆಲ್ ಉದ್ದಿಮೆಯನ್ನು ಕೈಗಾರಿಕೆ ಎಂದು ಪರಿಗಣಿಸುವುದು

38(256) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು): ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೋಟೆಲ್ ಉದ್ದಿಮೆಯನ್ನು ಕೈಗಾರಿಕೆ ಎಂದು ಪರಿಗಣಿಸುವಂತೆ ಬೇಡಿಕೆ ಸಲ್ಲಿಸಲಾಗಿದೆಯೆ, ಸಲ್ಲಿಸಿದ್ದಲ್ಲಿ ಯಾವಾಗ ಯಾರು ಸಲ್ಲಿಸಿರುತ್ತಾರೆ;

ಆ) ಕೈಗಾರಿಕೆ ಎಂದು ಪರಿಗಣಿಸುವ ಬಗ್ಗೆ ಸರ್ಕಾರದ ನಿಲುವೇನು;

ಇ) ಕೈಗಾರಿಕೆ ಎಂದು ಘೋಷಿಸಿದ ನಂತರ ಹೋಟೆಲ್ ಉದ್ಯಮದಾರರಿಗೆ ದೊರಕುವ ವಿಶೇಷ ಸವಲತ್ತುಗಳು ಯಾವುವು?